ಶೌಚಾಲಯಗಳು ಬೇಕೋ ಅಂತಹ ಶೌಚಾಲಯಗಳನ್ನು ಮಾಡಿ, ಅವರು ನೋಡಿಕೊಳ್ಳಬೇಕಾಗುತ್ತದೆ. ನೀರಿನ ವ್ಯವಸ್ಥೆ ಮಾಡಬೇಕಾಗುತ್ತದೆ, ನೀರಿನ ವ್ಯವಸ್ಥೆ ಬಹಳ ಮುಖ್ಯ. ಮತ್ತೆ ಇದರ ಅವಶ್ಯಕತೆ ಅವರ ಮನಸ್ಸಿಗೆ ನಾಟುತ್ತದೆ. ಏಕೆಂದರೆ, ಕಾಲ ಬಹಳ ಬದಲಿಯಾಗಿದೆ. ಹಿಂದೆ, ನಮ್ಮ ಹಳ್ಳಿ ಜನ ಗುಡ್ಡಕ್ಕೆ ಯಾವ ರೀತಿ ಹೋಗುತ್ತಿದ್ದರು, ಆ ರೀತಿ ಹೆಣ್ಣು ಮಕ್ಕಳು, ಗಂಡು ಮಕ್ಕಳು ಇವತ್ತು ಹೋಗುವುದು ಬಹಳ ಕಷ್ಟವಿದೆ. ಅವರ ಮಾನ ಮರ್ಯಾದೆಗೆ ಧಕ್ಕೆ ಬರುವಂತಹ ಪರಿಸ್ಥಿತಿ ಇದ್ದಾಗ, ಮಹಿಳೆಯರ ಶೌಚಾಲಯಗಳೇನಿದೆ ಅದಕ್ಕೆ ಬಹಳಷ್ಟು ಆದ್ಯತೆಯನ್ನು ನಾನಂತೂ ವೈಯಕ್ತಿಕವಾಗಿ, ಮಂತ್ರಿಯಾಗಿ ಕೊಡಲಿಕ್ಕೆ ತಯಾರಿದ್ದೇನೆ. ವಾಟಾಳ್ ನಾಗರಾಜ್‌ರವರು ಅಂತಹ ಒಂದು ಕಾರ್ಯಕ್ರಮ ಹಾಕಿಕೊಂಡು ಅವರದೇ ಕ್ಷೇತ್ರದಲ್ಲಿ ಎಷ್ಟು ಕಡೆ ಇಂತಹ ಶೌಚಾಲಯಗಳನ್ನು ಮಾಡಬೇಕೆಂಬುದನ್ನು ತೋರಿಸಿಕೊಟ್ಟರೆ, ನಾನು ಅವರ ಜೊತೆ ಹೋಗಿ ಮಾದರಿ ಶೌಚಾಲಯಗಳನ್ನು ಮಾಡಿ, ಇಡೀ ಕರ್ನಾಟಕದಲ್ಲಿ ಅದರ ಬಗ್ಗೆ ಪ್ರಚಾರವಾಗಬೇಕಾಗಿದೆ. ಇದು ಬರೀ ವಾಟಾಳ್ ನಾಗರಾಜ್‌ರಿಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಈ ರೀತಿ ಯಾವ ಯಾವ ಕ್ಷೇತ್ರದಲ್ಲಿ, ನಮ್ಮ ಶಾಸಕರು ಇದಕ್ಕೆ ಮನಸ್ಸು ಕೊಟ್ಟು, ಶ್ರದ್ಧೆಯಿಂದ ಮಾಡಲಿಕ್ಕೆ ತಯಾರಾಗುತ್ತಾರೆ, ನಾನು ಅವರ ಜೊತೆಯಲ್ಲಿ ಸಂಪೂರ್ಣವಾಗಿರುತ್ತೇನೆ. ಇದರ ಬಗ್ಗೆ ಹಣದ ಅಭಾವ ಇಲ್ಲ. ಒಂದು ಆಸೆ ಏನೆಂದರೆ, ಇದನ್ನು ಎರಡು ವರ್ಷದಿಂದ ಹೇಳಿ, ಹೇಳಿ ನನಗೂ ಸಾಕಾಗಿದೆ. ಇವತ್ತು ಸುದೈವದಿಂದ ಹೊಸ ಪಂಚಾಯತ್ ರಾಜ್‌ವ್ಯವಸ್ಥೆಯಲ್ಲಿ 43 ಪರ್ಸೆಂಟ್ ಮಹಿಳೆಯರು ರಿಸರ್ವೇಷನನಲ್ಲಿ ಇರುತ್ತಾರೆ. ಈಗಾಗಲೇ ಅವರು ಆರಿಸಿ ಬಂದಿದ್ದಾರೆ. ಆದಕಾರಣ, ಈ ಹೊಸ ಪಂಚಾಯ್ತಿಗಳಾದ ನಂತರ, ಅದಕ್ಕೊಂದು ಹೊಸ ಶಕ್ತಿ, ಸ್ಫೂರ್ತಿ ಬರುತ್ತದೆಂದು ನಾನು ನಂಬಿದ್ದೇನೆ.

1.25 ಪಿ.ಎಂ.

ಅದಕ್ಕೆ ಪ್ರತ್ಯೇಕವಾಗಿ ಒಂದೊಂದು ಲಕ್ಷ ರೂಪಾಯಿ ಕೊಡುತ್ತಿದ್ದೇವೆ ಜವಹರ್ ರೋಜ್‌ಗಾರ್ ಯೋಜನೆ ಮೂಲಕ. 4-5ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನಾನು ಕೇಳುತ್ತೇನೆ. ನಿಮ್ಮ ಪ್ರಾಮಾಣಿಕತೆಯ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ತಾವು ಈಗ ಪ್ರಾರಂಭ ಮಾಡಿ ಎಂದು ಹೇಳಿದಿರಿ. ನನ್ನ ತಾಲ್ಲೂಕಿನಿಂದ ನಾವು ಪ್ರಾರಂಭಮಾಡುತ್ತೇವೆ. ನಾಳೆ ಒಂದು ಪತ್ರವನ್ನು ಬರೆಯುತ್ತೇನೆ. ಅದಕ್ಕೆ ನೀವು ಹಣವನ್ನು ಎಷ್ಟು ಒದಗಿಸುತ್ತೀರಿ? ಅದಕ್ಕೆ ತಾವು ಯಾವ ಯಾವ ರೀತಿ ಮಾಡಿಕೊಡಬೇಕೆನ್ನುವ ಬಗ್ಗೆ ಮಾಡಿ ಕೊಡುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ : ಖಂಡಿತವಾಗಿ ಮಾಡುತ್ತೇನೆ.

ಎ.ಪಿ.ಎಂ.ಸಿ. ಮತಿಯಿಂದ ರಸ್ತೆಗಳ ದುರಸ್ತಿ

268 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವ್ಯವಸಾಯೋತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಬೇಕಾದ ರಸ್ತೆಗಳು ದುಃಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಆ ರಸ್ತೆಗಳ ದುರಸ್ತಿಗೆ ಆಯಾಯ ಜಿಲ್ಲೆಯಲ್ಲಿನ ಸಂಬಂಧಪಟ್ಟ ಎಪಿಎಂಸಿ ಸಮಿತಿಗಳು ಏನಾದರೂ ಕ್ರಮಕೈಗೊಂಡಿದೆಯೇ?*

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು

ಆ) ಮಾರುಕಟ್ಟೆ ಸಮಿತಿಯ ಉಳಿತಾಯ ಹಣದಿಂದ ಆಯಾ ಮಾರುಕಟ್ಟೆ ಪ್ರಾಂಗಣಗಳಿಗೆ ಸಂಪರ್ಕ ರಸ್ತೆಗಳನ್ನು ಕಲ್ಪಿಸುವ ಬಗ್ಗೆ ಈಗಾಗಲೇ ಸರ್ಕಾರವು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಾವಳಿಗಳು 1968ಕ್ಕೆ

ತಿದ್ದುಪಡಿ ಮಾಡಿದ್ದು ಸಂಬಂಧಪಟ್ಟ ಕಲಂಗೆ ಇನ್ನು ಯಾವ ದಿನಾಂಕದಿಂದ ಜಾರಿಗೆ ಬರಬೇಕೆನ್ನುವುದಕ್ಕೆ ಆದೇಶ ಹೊರಡಿಸಬೇಕಾಗಿದ್ದು ಈ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಈ ಮಾರುಕಟ್ಟೆ ಸಮಿತಿಯ ಉಳಿತಾಯ ಹಣದಿಂದ ಮಾರ್ಕೆಟ್ ಯಾರ್ಡ್‌ಗಳಿಗೆ ಸಂಪರ್ಕ ರಸ್ತೆಯನ್ನು ನಾವು ವ್ಯವಸ್ಥೆ ಮಾಡುತ್ತೇವೆ, ಅದಕ್ಕೆ ಸೂಕ್ತವಾಗಿರತಕ್ಕಂಥ ನಿಯಮಾವಳಿಗಳಿಗೆ ತಿದ್ದುಪಡಿ ತಂದಿದ್ದೇವೆಂದು ಹೇಳಿದ್ದಾರೆ. ಆ ತಿದ್ದುಪಡಿ ಆದೇಶ ಯಾವಾಗಿನಿಂದ ಜಾರಿಗೆ ಬರುತ್ತದೆ. ಆ ಆದೇಶದ ವಿವರಗಳು ಏನು? ಅದು ಅಲ್ಲದೆ ಈ ರಾಜ್ಯದ ಬೊಕ್ಕಸಕ್ಕೆ ಈ ಒಂದು ವ್ಯವಸಾಯ ಉತ್ಪನ್ನ ಮಾರುಕಟ್ಟೆಯಿಂದ ಎಷ್ಟು ಹಣ ಸಂದಾಯವಾಗುತ್ತದೆಂದು ನಾನು ಕೇಳಬಯಸುತ್ತೇನೆ.

ಶ್ರೀ ಮದನಗೋಪಾಲ ನಾಯಕ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಆತ್ಮಾನಂದರವರು ಕೇಳಿರತಕ್ಕಂಥ ಪ್ರಶ್ನೆ ಬೇರೆ. ಅವರು ಆದಾಯದ ಬಗ್ಗೆ ಕೇಳಿದ್ದಾರೆ. ಆ ಮಾಹಿತಿಯನ್ನು ನಾನುಎರಡು ಮೂರು ದಿವಸಗಳಲ್ಲಿ ಒದಗಿಸಿಕೊಡುತ್ತೇನೆ. ಇನ್ನು ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ, ಸಂಪರ್ಕ ರಸ್ತೆಗಳನ್ನು ಮಾರುಕಟ್ಟೆ ಸಮಿತಿವತಿಯಿಂದ ಮಾಡಿ ಕೊಡಿ ಎಂದು ಕೇಳಿದ್ದಾರೆ. ಅಂದ್ರೆ ಕಾಯ್ದೆ 16 (63)ಕ್ಕೆ ತಿದ್ದುಪಡಿ ತಂದ ಮೇಲೆ ಮೊದಲು ಈ ರಸ್ತೆಗಳ ಬಗ್ಗೆ ಕೆಲವು ವ್ಯಾಪಾರಸ್ಥರು, ರೈತರು ಏನು ಹೇಳುತ್ತಾರೆ ಎಂದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ ಅಲ್ಲಿ ಒಂದು ಡಿಸಿಷನ್ ಆಗಿದೆ.

ಹಳ್ಳಿಗಳಲ್ಲಿ ಬರತಕ್ಕಂಥ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ರಸ್ತೆಗಳಾಗಿರುವುದರಿಂದ ರೈತರ ಹಣ ವ್ಯಯ ಮಾಡತಕ್ಕಂಥಾದ್ದು ಸರಿ ಅಲ್ಲ ಎಂದು ಹೇಳಿ ಡಿಸಿಷನ್ ಕೊಟ್ಟ ಮೇಲೆ ನಾವು ಆ ರೀತಿಯ ಸಂಪರ್ಕ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಸಂಪರ್ಕ ರಸ್ತೆ ಅಂದ್ರೆ ಈಗ ಮಾರ್ಕೆಟ್ ಯಾರ್ಡ್‌ನಿಂದ ಮೈನ್ ರೋಡ್ ಆಗಲಿ ಮಾರ್ಕೆಟ್‌ಗೆ ಬರತಕ್ಕಂಥ ರಸ್ತೆಯಾಗಲಿ ಮೈನ್ ರೋಡ್‌ನಿಂದ ಮಾರುಕಟ್ಟೆಗೆ ಬರತಕ್ಕಂಥ ಸಂಪರ್ಕರಸ್ತೆ ಎಂದು ಏನು ಅಂತಾರೆ ಅದನ್ನು ಒದಗಿಸಿಕೊಡುವುದಕ್ಕೆ ಸಾಧ್ಯ ಇದೆ. ಅದರ ಪ್ರಕಾರ ಒಂದು ಕಿಲೋಮೀಟರ್ ಆಗಲಿ ಎರಡು ಕಿಲೋಮೀಟರ್ ಆಗಲಿ ಎಷ್ಟೇ ರಸ್ತೆ ಮೈನ್ ರೋಡ್‌ನಿದ ಮಾರ್ಕೆಟ್ ಯಾರ್ಡ್‌ಗೆ ಬರಲಿಕ್ಕೆ ಏನು ಅನುಕೂಲತೆ ಬೇಕು ರೈತರಿಗೆ ಅನುಕೂಲತೆ ಮಾಡಿ ಕೊಡಲಿಕ್ಕೆ ಅದಷ್ಟು ಬೇಗ ಮಾಡಿಕೊಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರು ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರದ ರಚನೆ,

301- ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಒಟ್ಟು ಉದ್ಯಾನವನಗಳೆಷ್ಟು ?

ಆ) ಅವುಗಳ ಪೈಕಿ ಎಷ್ಟು ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿದೆ ಎಷ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಸರ್ಕಾರದ ವಶದಲ್ಲಿದೆ?

ಇ) ಆ ಎಲ್ಲಾ ಉದ್ಯಾನವನಗಳನ್ನು ಹಾಗೂ ಇನ್ನೂ ಹಲವಾರು ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಬೆಂಗಳೂರು ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)